ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ

ಐದನೇ ಅಧಿವೇಶನ

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1996

(1996ರ ವಿಧಾನ ಸಭಾ ವಿಧೇಯಕ ಸಂಖ್ಯೆ 1)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲಿ ವಿಧೇಯಕ.

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961ನ್ನು (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10) ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ನಲವತ್ತೇಳನೆಯ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ;

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ 1996 ಎಂದು ಕರೆಯತಕ್ಕದ್ದು.

(2) ಇದು 1995ರ ಅಕ್ಟೋಬರ್ ಇಪ್ಪತ್ತನೆಯ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 109ನೇ ಪ್ರಕರಣದ ತಿದ್ದುಪಡಿ.- (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವ) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10) 109ನೇ ಪ್ರಕರಣದ (1 ಎ) ಉಪ ಪ್ರಕರಣದಲ್ಲಿ "ಅಧಿಸೂಚನೆಯ ಮೂಲಕ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು" ಪದಗಳಿಗೆ "ಅಧಿಸೂಚನೆಯ ಮೂಲಕ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಉಪಬಂಧಗಳಿಗೆ ಮತ್ತು ಅದರ ಮೂಲಕ ನಿರ್ದಿಷ್ಟಪಡಿಸಬಹುದಾದ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು 63,79ಎ, 79ಬಿ ಮತ್ತು 80ನೇ ಪ್ರಕರಣಗಳ ಉಪಬಂಧಗಳಿಂದ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು" ಎಂಬ ಪದಗಳು, ಅಂಕಿಗಳು, ಆವರಣಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧ್ಯಾದೇಶ, 1996ನ್ನು (1996ರ ಕರ್ನಾಟಕ ಅಧ್ಯಾದೇಶ 1) ಈ ಮೂಲಕ ನಿರಸಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯದೊಳಗೆ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸಾಮರ್ಥ್ಯವುಳ್ಳ ಲಚರ ಕೃಷಿ, ಪುಷ್ಪ ಕೃಷಿ, ತೋಟಗಾರಿಕೆ ಆಧಾರಿತ ಕೈಗಾರಿಕೆಗಳನ್ನು ಮತ್ತು ಹ ಉದ್ಯಮವನ್ನು ಸಹ ಅಭಿವೃದ್ಧಿಗೊಳಿಸುವುದು ಹಾಗೂ ಅವುಗಳ ಸ್ಥಾಪನೆ ತ್ತು ವಿಸ್ತರಣೆಗೆ ಸುಲಭವಾಗಿ ಭೂಮಿಗಳನ್ನು ಪಡೆಯುವುದು ಸಾಧ್ಯವಾಗುವಂತೆ ರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣವನ್ನು ದ್ದುಪಡಿ ಮಾಡುವುದಕ್ಕಾಗಿ 1995ರ ಕರ್ನಾಟಕ ಅಧಿನಿಯಮ ಸಂಖ್ಯೆ 31ನ್ನು ಧಿನಿಯಮಿತಗೊಳಿಸಲಾಯಿತು.

109ನೇ ಪ್ರಕರಣದ (1ಎ) ಉಪ-ಪ್ರಕರಣದ ಅಡಿ ನೀಡುವ ಭೂ ವಿನಾಯಿತಿಯು 961ರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಉಪಬಂಧಗಳಿಗೆ ಳಪಟ್ಟಿರುತ್ತದೆ ಹಾಗೂ ವಿನಾಯಿತಿಯ ನೀಡಿಕೆಯು 63, 79ಎ, 79ಬಿ ಅಥವಾ)ನೇ ಪ್ರಕರಣದ ಉಪಬಂಧಗಳಿಗೆ ಸೀಮಿತವಾಗಿದೆಯೆಂಬುದನ್ನು ಸ್ಪಷ್ಟಪಡಿಸುವ ಲುವಾಗಿ ಸದರಿ ಉಪ-ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ 1995ರ ರ್ನಾಟಕ ಅಧ್ಯಾದೇಶ ಸಂಖ್ಯೆ 8ನ್ನು ಪ್ರಖ್ಯಾಪಿಸಲಾಯಿತು. 1995ರ ಅಧ್ಯಾದೇಶ ಂಖ್ಯೆ 8ರ ಅವಧಿ 1996 ಫೆಬ್ರವರಿ 8ರಂದು ಕೊನೆಗೊಳ್ಳಲಿದ್ದುದರಿಂದ 1996ರ ಧ್ಯಾದೇಶ ಸಂಖ್ಯೆ 1ನ್ನು ಪ್ರಖ್ಯಾಪಿಸಲಾಗಿತ್ತು. ಸದರಿ ಅಧ್ಯಾದೇಶದ ಬದಲಾಗಿ ಈ ಧೇಯಕವನ್ನು ಮಂಡಿಸಲಾಗಿದೆ. ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡಾವಳಿ ನಿಯಮಗಳ ನಿಯಮ 80ರ ಉಪ-ನಿಯಮ (1)ರ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ರಾಜ್ಯದೊಳಗೆ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸಾಮರ್ಥ್ಯವುಳ್ಳ ಲಚರ ಕೃಷಿ, ಪುಷ್ಪ ಕೃಷಿ,ತೋಟಗಾರಿಕೆ ಆಧಾರಿತ ಕೈಗಾರಿಕೆಗಳನ್ನು ಮತ್ತು ಗೃಹ ದ್ಯಮವನ್ನು ಸಹ ಅಭಿವೃದ್ಧಿಗೊಳಿಸುವುದು ಹಾಗೂ ಅವುಗಳ ಸ್ಥಾಪನೆ ಮತ್ತು ಸ್ತರಣೆಗೆ ಸುಲಭವಾಗಿ ಭೂಮಿಗಳನ್ನು ಪಡೆಯುವುದು ಸಾಧ್ಯವಾಗುವಂತೆ ಕರ್ನಾಟಕ ೂಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣವನ್ನು ತಿದ್ದುಪಡಿ ಾಡುವುದಕ್ಕಾಗಿ 1995ರ ಕರ್ನಾಟಕ ಅಧಿನಿಯಮ ಸಂಖ್ಯೆ 31ನ್ನು ಧಿನಿಯಮಿತಗೊಳಿಸಲಾಯಿತು.

109ನೇ ಪ್ರಕರಣದ (1ಎ) ಉಪ-ಪ್ರಕರಣ ಅಡಿ ನೀಡುವ ಭೂವಿನಾಯಿತಿಯು)61ರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಉಪಬಂಧಗಳಿಗೆ ಳಪಟ್ಟಿರುತ್ತದೆ ಹಾಗೂ ವಿನಾಯಿತಿಯ ನೀಡಿಕೆಯು 63, 79ಎ, 79ಬಿ ಅಥವಾ)ನೇ ಪ್ರಕರಣದ ಉಪಬಂಧಗಳಿಗೆ ಸೀಮಿತವಾಗಿದೆಯೆಂಬುದನ್ನು ಸ್ಪಷ್ಟಪಡಿಸುವ ುವಾಗಿ ಸದರಿ ಉಪ-ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ 1995ರ ರ್ನಾಟಕ ಅಧ್ಯಾದೇಶ ಸಂಖ್ಯೆ 8ನ್ನು ಪ್ರಖ್ಯಾಪಿಸಲಾಯಿತು. 1995ರ ಅಧ್ಯಾದೇಶ ಂಖ್ಯೆ 8ರ ಅವಧಿ 1996ರ ಫೆಬ್ರವರಿ 8 ರಂದು ಕೊನೆಗೊಳ್ಳಲಿದ್ದುದರಿಂದ 1996 ಧ್ಯಾದೇಶ ಸಂಖ್ಯೆ 1ನ್ನು ಪ್ರಖ್ಯಾಪಿಸಲಾಗಿತ್ತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನಸಭೆಯು ಧಿವೇಶನದಲ್ಲಿಲ್ಲದಿದ್ದುದರಿಂದ ಮೇಲ್ಕಂಡ ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಅಧ್ಯಾದೇಶದ ಬದಲಾಗಿ ಮಂಡಿಸಲಾಗಿದೆ.